**<u>ದಿನಾಂಕಃ 06.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಕೆ.ಟಿ.ಟಿ. ವಕೀಲರಿಂದಃ-</u>

1) ಪ್ರತಿವಾದಿರವರಿಗೆ ನೋಟೀಸನ್ನು ನಾನೇ ಹೇಳಿ ನೀಡಿಸಿರುತ್ತೇನೆ ಎಂದರೆ ಸರಿ. ಸದರಿ ನೊಟೀಸನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ನೋಟೀಸಿನಲ್ಲಿ 2 ತಿಂಗಳಿನಲ್ಲಿ ಶಿವಕುಮಾರ್ ರವರು ಹಣ ವಾಪಸ್ಸು ಕೊಡುವುದಾಗಿ ಹೇಳಿದ್ದ ವಿಚಾರ ನಮೂದು ಮಾಡಲಾಗಿತ್ತೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ ಸಾಕ್ಷಿ ಮುಂದುವರೆದು ಮೌಖಿಕವಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಸಂದರ್ಭದಲ್ಲಿ ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುವುದು. ದಾವೆ ಸಲ್ಲಿಸುವ ಮೊದಲು ದಾವಾ ಪತ್ರದಲ್ಲಿ ತಿಳಿದುಕೊಂಡ ನಂತರವೇ ನಾನು ಸಹಿ ಮಾಡಿರುವುದು. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನೂ ಸಹ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಶಿವಕುಮಾರ್ ರವರು 2 ತಿಂಗಳ ಒಳಗೆ ಹಣ ಕೊಡುತ್ತೇನೆ ಎಂದು ಹೇಳಿದ್ದರು ಎಂಬ ವಿಚಾರ ನಿಮ್ಮ ವಾದ ಪತ್ರದಲ್ಲಿ ನಮೂದಿಸಲಾಗಿದೇಯೇ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಚೆಕ್ ನೀಡಿದ್ದರು ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಇರುವ ಅಂಶಗಳನ್ನೇ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದು ಎಂದರೆ ಸರಿ.

2) ನಿಮ್ಮನ್ನು ಪಾಟೀ ಸವಾಲು ಆದ ನಂತರ ನಿಮ್ಮ ವಾದ ಪತ್ರವನ್ನು ತಿದ್ದುಪಡಿ ಮಾಡಿಕೊಂಡಿರುತ್ತೀರಾ ಎಂದರೆ ಸರಿ. ನೀವು ನಿಮ್ಮ ವಾದ ಪತ್ರದಲ್ಲಿ ಮಾಡಿರುವ ತಿದ್ದುಪಡಿ ಮಾಡಿರುವ ಅಂಶ ನಿಮ್ಮ ಯಾವುದೇ ದಾಖಲಾತಿಯಲ್ಲಿ ಇಲ್ಲ ಎಂದರೆ ಸರಿ. ನೀವು ಸಲ್ಲಿಸಿದ ದಾವೆಯು ಕಾಲ ಪರಿಮಿತಿ ಒಳಗೆ ಇಲ್ಲದ ಕಾರಣ ನಿಮ್ಮ ವಾದ ಪತ್ರವನ್ನು ತಿದ್ದುಪಡಿ ಮಾಡಿಕೊಳ್ಳಲಾಗಿದೆ ಎಂದರೆ ಸಾಕ್ಷಿ ಚೆಕ್ ನ ದಿನಾಂಕ ಇತ್ತು ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪತ್ರಮಾಣ ಪತ್ರದಲ್ಲಾಗಲೀ, ವಾದ ಪತ್ರದಲ್ಲಾಗಲೀ ಅಥವಾ ನೋಟೀಸಿನಲ್ಲಾಗಲೀ ದಿಃ 09.05.2014 ರಂದು ಶಿವಕುಮಾರ್ ರವರಿಗೆ ನೀವು ಹಣ ಪಾವತಿ ಮಾಡಿರುವ ವಿಚಾರ ನಮೂದಿಸಲಾಗಿದೆಯೇ ಎಂದರೆ ಹೌದು ಎಂದು

ನುಡಿಯುತ್ತಾರೆ. ಶಿವಕುಮಾರ್ ರವರ ಮರಣಾನಂತರ ಹೇಗಾದರೂ ಮಾಡಿ ಹಣ ಲಪಟಾಯಿಸುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ಪ್ರಸ್ತುತ ದಾವೆ ಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ